# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಾರ್ಯಾಲಯ
ನಂ.29, ವಿಜಯನಗರ 2 ನೇ ಹಂತ,
ಹಿನಕಲ್ ಮೈಸೂರು–570017
CIN: U40109KA2004SGC035177
Website: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಚಾಮುಂಡಿಪುರಂ ಉಪ-ವಿಭಾಗ,
66/11 KV ದಕ್ಷಿಣ ವಿದ್ಯುತ್ ವಿತರಣಾ ಕೇಂದ್ರ ಆವರಣ,
H.D ಕೋಟೆ-ಮಾನಂದವಾಡಿ ರಸ್ತೆ, ಮೈಸೂರು-570008.
aeecpm@cescmysore.org
ದೂರವಾಣಿ:0821-2488400


ಕ್ರಮ ಸಂಖ್ಯೆ:ಸಕಾನಿಇಂ(ವಿ)/ಸಲೆ/ಹಿಸ /ಚಾಉವಿ/2017-18/3114-18 ದಿನಾಂಕ: 25-11-17

ಲಗತ್ತು :

## ಸಭಾ ನಡಾವಳಿಗಳು

ದಿನಾಂಕ 17-11-2017 ನೇ ಶುಕ್ರವಾರ ಮಧ್ಯಾಹ್ನ 3-00 ಗಂಟೆಗೆ ಚಾಮುಂಡಿಪುರಂ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ವೃತ್ತ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು. ದಿನಾಂಕ 13-09-2017 ರಂದು ನಡೆದ ಜನಸಂಪರ್ಕ ಸಭೆಯಲ್ಲಿ ಬಂದ ಅರ್ಜೀಗಳನ್ನು ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚೀಸಿದರು. ಹಿಂದಿನ ಸಭೆಯ ನಡಾವಳಿ ಮತ್ತು ತೆಗೆದುಕೊಂಡ ಕ್ರಮವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಚಾಮುಂಡಿಪುರಂ ಉಪವಿಭಾಗ ರವರು ಈ ಸಭೆಗೆ ತಿಳಿಸಿದರು.

78

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು

1) ಶ್ರೀ.ಎನ್.ನರಸಿಂಹೇಗೌಡ, ಅ.ಇಂ(ವಿ), ಕಾ ಮತ್ತು ಪಾ ವೃತ್ತ , ಮೈಸೂರು.
2) ಶ್ರೀ.ಎಂ.ಕೆ.ಸೋಮಶೇಖರ್. ಕಾ.ಇಂ(ವಿ), ಕಾ ಮತ್ತು ಪಾ ಎನ್.ಆರ್.ಮೊಹಲ್ಲಾ ವಿಭಾಗ, ಮೈಸೂರು.
3) ಶ್ರೀ.ಪಿ.ಚಿಕ್ಕಸಿದ್ದೇಗೌಡ, ಸ.ಕಾ.ಇಂ(ವಿ), ಚಾಮುಂಡಿಪುರಂ ಉಪವಿಭಾಗ, ಮೈಸೂರು.
4) ಶ್ರೀ.ಎಸ್.ರಮೇಶ್, ಸ.ಇಂ(ವಿ), ವಿದ್ಯಾರಣ್ಯಪುರಂ ಶಾಖೆ.
5) ಶ್ರೀ.ಇ.ಮಂಜು, ಸ.ಇಂ(ವಿ), ಲಕ್ಷ್ಮಿಪುರಂ ಶಾಖೆ.
6) ಶ್ರೀಮತಿ.ಯು.ಜಿ.ಸವಿತಾ, ಸಇಂ(ತಾಂ)
7) ಶ್ರೀ.ಎಸ್.ರವಿ, ಪ್ರಭಾರ ಸಲೆ/ಹಿಸ
8) ಶ್ರೀಮತಿ.ಬಿ.ಪಿ.ಶಾಲಿನಿ, ಕಿ.ಇಂ(ವಿ), ಜೆ.ಪಿ.ನಗರ ಶಾಖೆ.
9) ಶ್ರೀ.ರಾಮದಾಸ್, ಪ್ರಭಾರ ಸ.ಇಂ(ವಿ), ಕಡಕೊಳ ಶಾಖೆ.
10) ಶ್ರೀ.ರವಿ. ಕಿ.ಇಂ(ವಿ) ದೇವಲಾಪುರ ಶಾಖೆ


ಅಇಂ(ವಿ) ಕಛೇರಿ
ಚಾ.ವಿ.ಸ.ನಿ.ನಿ.
ಉ.ಲೆ.ನಿ.
4 DEC 2017
ಮೈಸೂರು


AEE(E) 4/12

******2.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.

| ಕ್ರ.ಸಂ | ಹೆಸರು ವಿಳಾಸ ಮೊಬೈಲ್ ಸಂಖ್ಯೆ | ಅಹವಾಲು/ಮನವಿ | ಕ್ರಮ |
|---|---|---|---|
| 1. | ಶ್ರೀ.ಅಶ್ವಥ್ ನಾರಾಯಣ, ವಿದ್ಯುತ್ ಗುತ್ತಿಗೆದಾರರು ಮತ್ತು ಇಂಜಿನಿಯರ್. **9449833792** | ನಿರ್ದೇಶಕರು (ತಾಂತ್ರಿಕ) ರವರ ಆದೇಶದಂತೆ 250 KV ಪರಿವರ್ತಕ ಅಳವಡಿಸುವಂತಿಲ್ಲ. ಆದರೂ ಈಗ 250 KV ಪರಿವರ್ತಕ ಅಳವಡಿಸಲು ಸೂಚಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಈ ಆದೇಶವು ಕೆ.ಇ.ಆರ್.ಸಿ ನಿಯಮವಾಗಿರುವುದಿಲ್ಲ. ಹಾಗೆಯೇ ಗ್ರಾಹಕರ ಕೋರಿಕೆ ಮೇರೆಗೆ ನಿಗಮ ಕಛೇರಿಯಿಂದ ವಿಶೇಷ ಅನುಮತಿ ಪಡೆದು U.G ಕೇಬಲ್ ಇರುವುದರಿಂದ 250KV ಪರಿವರ್ತಕವನ್ನು ಅಳವಡಿಸಲು ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿದರು. |
| | | GST ಯನ್ನು ಇಂಟಿಮೇಷನ್ ನ ಎಲ್ಲಾ ಒಟ್ಟು ಮೊತ್ತಕ್ಕೆ ಲೆಕ್ಕಾಚಾರ ಮತ್ತು ರಶೀದಿ ನೀಡಲು ಕೋರಿದರು.. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಎಲ್ಲಾ ಲೆಕ್ಕ ಶೀರ್ಷಿಕೆಯಡಿ ವಸೂಲಿ ಮಾಡುವ ಮೊತ್ತವು ಪ್ರತ್ಯೇಕವಾಗಿ ಲೆಕ್ಕೀಕರಿಸಬೇಕಾಗಿದ್ದು ಒಂದೊಂದು ಲೆಕ್ಕಶೀರ್ಷಿಕೆಗೂ ಪ್ರತ್ಯೇಕವಾಗಿ CGST ಮತ್ತು SGST ಯನ್ನು ಸರ್ಕಾರಕ್ಕೆ ಜಮಾ ಮಾಡಬೇಕಾಗಿರುವುದರಿಂದ ಒಟ್ಟು ಮೊತ್ತಕ್ಕೆ GST ಯನ್ನು ರಶೀದಿ ಹಾಕಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿದರು. |
| 2. | ಶ್ರೀ.ಸತ್ಯನಾರಾಯಣ, ಮೈಸೂರು ಗ್ರಾಹಕರ ಪರಿಷತ್ ಸದಸ್ಯರು **9481530345** | ರೀಡಿಂಗ್ ದಿನಾಂಕವನ್ನು ಬದಲಾವಣೆ ಮಾಡಿದಾಗ Slab Rate ಹೆಚ್ಚಾಗಿ ಬಿಲ್ಲು ಆಗುತ್ತಿದೆ ಎಂದು ತಿಳಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಅಧೀನ ಸಿಬ್ಬಂದಿಗಳಿಂದ ಮಾಹಿತಿ ಪಡೆದು ತಂತ್ರಾಂಶದಲ್ಲಿ ನಿಖರವಾಗಿ ಎಷ್ಟು ಅವಧಿಗೆ ಬಿಲ್ಲು ಆಗಿದೆ ಆ ಪ್ರಕಾರವೇ Slab Rate ನಲ್ಲಿ ಬಿಲ್ಲು ಆಗುತ್ತಿದ್ದು ಬಿಲ್ಲು ಸರಿಯಾಗಿರುತ್ತದೆ ಎಂದು ತಿಳಿಸಿದರು. |
| | | ಖಾಲಿ ಇರುವ ಮನೆಗಳ ವಿದ್ಯುತ್ ಬಿಲ್ಲಿಗೆ ನಿಗದಿತ ಶುಲ್ಕವನ್ನು ಯಾಕೆ ಹಾಕುತ್ತಿದ್ದೀರಿ ಎಂದು ಕೇಳಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕ್ಷೇತ್ರದ ನಿರ್ವಹಣೆಗಾಗಿ ಕೆ.ಇ.ಆರ್.ಸಿ ನಿಗಧಿಪಡಿಸಿರುವಂತೆ ನಿಗದಿತ ಶುಲ್ಕವನ್ನು ವಿಧಿಸಲಾಗುತ್ತಿದೆ ಎಂದು ವಿವರಿಸಿದರು. |

| | | | |
|---|---|---|---|
| | | ಆರ್.ಆರ್.ಸಂಖ್ಯೆಗಳ ಖಾತೆ/ಹೆಸರು ಬದಲಾವಣೆಗೆ ತೆಗೆದುಕೊಳ್ಳುತ್ತಿರುವ ದಾಖಲೆಗಳ ಬಗ್ಗೆ ವಿಚಾರಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಗ್ರಾಹಕರು ಪ್ರತೀ ಸ್ಥಾವರಕ್ಕೆ ಹೆಸರು ಬದಲಾವಣೆಗೆ ಕ್ರಯಪತ್ರ, ಖಾತೆ ಜೊತೆಗೆ ಎಲೆಕ್ಟ್ರಿಕಲ್ ಅಗ್ರಿಮೆಂಟ್, ಇಂಡಿಮಿನಿಟಿ ಬಾಂಡ್, ಮುಚ್ಚಳಿಕೆ ಪತ್ರವನ್ನು ನೀಡಿ ಹೆಸರು ಬದಲಾವಣೆ ಶುಲ್ಕ ರೂ.100-00 ಗಳನ್ನು ಪಾವತಿಸಬೇಕು ಎಂದು ತಿಳಿಸಿದರು. |
| | | ಲಕ್ಷ್ಮೀಪುರಂನ ತಮ್ಮ ಅಪಾರ್ಟ್ ಮೆಂಟ್ ಲಕ್ಷ್ಮಿ ರಾಮಸ್ವಾಮಿ ಟಿ.ಸಿ ಪಕ್ಕವಿರುವ ಕಂಬವನ್ನು ಸ್ಥಳಾಂತರಿಸಲು ಕೋರಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸ.ಕಾ.ಇಂ(ವಿ)ಚಾಮುಂಡಿಪುರಂ ಉಪವಿಭಾಗ ರವರಿಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |

ಹಾಗೆಯೇ ಶ್ರೀ.ರಘುಪತಿ, ಸದಸ್ಯರು, ಮೈಸೂರು ಗ್ರಾಹಕರ ಪರಿಷತ್ ರವರು ಮತ್ತು ಶ್ರೀ.ಸತ್ಯನಾರಾಯಣ, ಸದಸ್ಯರು, ಮೈಸೂರು ಗ್ರಾಹಕರ ಸಮಿತಿ ರವರು ಈ ಕೆಳಕಂಡ ವಿಷಯಗಳ ಬಗ್ಗೆ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

1) ಬೀದಿ ದೀಪ ಸ್ಥಾವರಗಳ ಮಾಪಕಗಳಿಗೆ ಮೀಟರ್ ಬಾಕ್ಸ್ ಹಾಕಿ ಮಾಪಕದಲ್ಲಿ ಬಳಕೆ ದಾಖಲಾಗುತ್ತಿರುವ ಬಗ್ಗೆ.
2) ವಿದ್ಯುಚ್ಛಕ್ತಿ ಅಡಚಣೆ ಬಗ್ಗೆ ಮತ್ತು ಬಿಲ್ಲಿನ ಬಗ್ಗೆ ಗ್ರಾಹಕರಿಗೆ ಮೊಬೈಲ್ ಗಳಿಗೆ ದೂರವಾಣಿಗೆ ಸಂದೇಶ ರವಾನಿಸುತ್ತಿರುವ ಬಗ್ಗೆ.
3) ಶೂನ್ಯ ಬಳಕೆಯ ಸ್ಥಾವರಗಳ ಮನೆಗಳಿಗೆ ಮಾಪಕ ಓದುಗರು ಅಕ್ಕ ಪಕ್ಕದವರನ್ನು ವಿಚಾರಿಸುತ್ತಿರುವ ಬಗ್ಗೆ.

ಎಲ್ಲರಿಗೂ ವಂದಿಸಿ ಸಭೆಯನ್ನು ಸಂಜೆ 6-30 ಗಂಟೆಗೆ ಮುಕ್ತಾಯಗೊಳಿಸಲಾಯಿತು,.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಚಾಮುಂಡಿಪುರಂ ಉಪವಿಭಾಗ,
ಮೈಸೂರು.

<u>ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ವೃತ್ತ, ಕುವೆಂಪುನಗರ, ಚಾ.ವಿ.ಸ.ನಿ.ನಿ., ಮೈಸೂರು.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ,,ಮೈಸೂರು.
3) ಸಹಾಯಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ವಿದ್ಯಾರಣ್ಯಪುರಂ / ಲಕ್ಷ್ಮೀಪುರಂ / ಕಡಕೊಳ ರವರ ಮಾಹಿತಿಗಾಗಿ.
4) ಕಿರಿಯ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ಜೆ.ಪಿ.ನಗರ / ದೇವಲಾಪುರ ರವರ ಮಾಹಿತಿಗಾಗಿ.
5) ಕಛೇರಿ ಪ್ರತಿ.